


ಐತಿಹಾಸಿಕ ಮಹತ್ವ ಹೊಂದಿರುವ ಸ್ಟಾರಿ ಮೋಸ್ಟ್ (ಹಳೆಯ ಸೇತುವೆ)

# ಹೆಣ್ಣುಮಕ್ಕಳ ದುಃಖದಿಂದ ತೊಯ್ದ ನೆಲ ಬೋಸ್ನಿಯಾ

## ಸೌಂದರ್ಯದ ಒಡಲೊಳಗೆ ಜ್ವಾಲಾಮುಖಿ

■ ಡಿ.ಜಿ. ಮಲ್ಲಿಕಾರ್ಜುನ

ಬೋಸ್ನಿಯಾ ಮತ್ತು ಹರ್ಜೆಗೋವಿನಾ ದೇಶದ ಮೋಸ್ಟಾ (Mostar) ನಗರವನ್ನು ನಾವು ತಲುಪುವಷ್ಟರಲ್ಲಿ ಕತ್ತಲಾಗಿದ್ದರಿಂದ ಈಡನ್ ಹೋಟೆಲಿನಲ್ಲಿ ತಂಗಿದೆವು. ಮರುದಿನ ಮುಂಜಾನೆ ನಮ್ಮನ್ನೆಲ್ಲಾ ಊರು ತೋರಿಸುವ ಮಾರ್ಗದರ್ಶಿ ಮುನ್ನಡೆಸಿಕೊಂಡು ಹೊರಟಾಗ ಮೊದಲು ಕಂಡಿದ್ದು ಅತ್ಯಂತ ಎತ್ತರವಾದ ಸೇಂಟ್ ಪೀಟರ್ ಮತ್ತು ಪಾಲ್ ಚರ್ಚ್.

ಈ ಚರ್ಚ್‌ನ ಗಂಟೆ ಗೋಪುರವು 352 ಅಡಿ ಎತ್ತರವಿದೆ. ಇಡೀ ಆಗ್ನೇಯ ಯೂರೋಪ್‌ನಲ್ಲೇ ಅತ್ಯಂತ ಎತ್ತರದ ಗಂಟೆ ಗೋಪುರಗಳಲ್ಲಿ ಒಂದಾಗಿರುವ ಇದನ್ನು ಪ್ರವಾಸಿಗರು ಹಣ ಕೊಟ್ಟು 75 ಮೀಟರ್ ಎತ್ತರದಲ್ಲಿರುವ ವೀಕ್ಷಣಾ ವೇದಿಕೆಯನ್ನು ಏರಿ ಇಡೀ ಮೋಸ್ಟಾ ನಗರದ ಸುಂದರ ನೋಟವನ್ನು ಕಣ್ತುಂಬಿಕೊಳ್ಳಬಹುದು. 1866ರಲ್ಲಿ ಕಟ್ಟಿದ್ದ ಈ ಚರ್ಚ್ 1992ರ ಬೋಸ್ನಿಯಾ ಯುದ್ಧದ ಸಮಯದಲ್ಲಿ ಶೆಲ್ ದಾಳಿಯಿಂದಾಗಿ ಸಂಪೂರ್ಣವಾಗಿ ನಾಶವಾಗಿತ್ತು. ಈಗಿರುವ ಬೃಹತ್ ಚರ್ಚ್ ಅನ್ನು 1999ರಲ್ಲಿ ಅದೇ ಸ್ಥಳದಲ್ಲಿ ಮರುನಿರ್ಮಾಣ ಮಾಡಲಾಗಿದೆ.

ಚರ್ಚ್ ಅನ್ನು ವಿವಿಧ ಕೋನಗಳಿಂದ